**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 06.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ನಂ.1(ಬಿ) ಪರ ವಕೀಲರಿಂದಃ**

ನಾನು ಕಂಪ್ಯೂಟರ್ ನಲ್ಲಿ ಡಿಪ್ಲೋಮಾ ವಿದ್ಯಾಭ್ಯಾಸ ಮುಗಿಸಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇದೆ. ಟಿ ಬಿ ಲೆಂಗಡೆ partnership ಫರ್ಮ ಇದು ದಿಃ21/08/1992 ರಲ್ಲಿ desolve ಆಗಿದೆ ಎಂದರೆ ಸಾಕ್ಷಿ ಪ್ರತಿವಾದಿ ನಂ.1(ಬಿ)ಹಾಗೆ ಹೇಳುತ್ತಾರೆ ಆದರೆ ನಾನು ಒಪ್ಪುವುದಿಲ್ಲ ಎಂದು ನುಡಿಯುತ್ತಾರೆ. ಟಿ ಬಿ ಲೆಂಗಡೆ partnership ಫರ್ಮ resolution ಆದ ಬಗ್ಗೆ ನಿಡಿ.7 ದಾಖಲೆ ಆಗಿರುತ್ತದೆ ಎಂದರೆ ಸರಿ. ಅದರಲ್ಲಿ ನಿಮ್ಮ ತಂದೆಯ ಸಹಿ ಇದೆ ಎಂದರೆ ಸಾಕ್ಷಿ ಅನಿಸುತ್ತಿದೆ ಆದರೆ ನನಗೆ ಖಚಿತವಾಗಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಟಿ ಬಿ ಲಿಗಾಡೆ partnership ಫರ್ಮ ಇದು 1992 ರಲ್ಲಿಯೇ desolve ಆಗಿದೆ ಹಾಗೂ ನಿಡಿ.7 ದಾಖಲೆಗೆ ನನ್ನ ತಂದೆ ಸಹಿ ಮಾಡಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಫರ್ಮ ಇನ್ನೂ ಅಸ್ಥಿತ್ವದಲ್ಲಿದೆ ಎಂದು ನುಡಿಯುತ್ತಾರೆ. ಸದರಿ ಟಿ ಬಿ ಲೆಂಗಡೆ partnership ಫರ್ಮ desolve ಆದ ನಂತರ ಮೃತ ಪ್ರತಿವಾದಿ ನಂ.1 ಮಾತ್ರ ಸದರಿ ಫರ್ಮನ್ನು Proprietory concern ಎಂದು ಮುಂದುವರೆಸಿಕೊಂಡು ಹೋಗಿರುತ್ತಾರೆಂದರೆ ಸರಿಯಲ್ಲ. ಈ ವಿಷಯ ನನಗೆ ಗೊತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1992 ರಲ್ಲಿ ಟಿ ಬಿ ಲೆಂಗಡೆ partnership ಫರ್ಮ desolve ಆದ ಕಾರಣ ಸದರಿ ಫರ್ಮಗೆ ಸಂಬಂಧಿಸಿದಂತೆ ಕೊಡುವ ತೆಗೆದುಕೊಳ್ಳುವ ಯಾವುದೇ ವ್ಯವಹಾರಗಳು ಇರುವುದಿಲ್ಲ ಎಂದರೆ ನನಗೆ ಖಚಿತವಾಗಿ ಗೊತ್ತಿಲ್ಲ. ವಾದಪತ್ರದಲ್ಲಿ ತೋರಿಸಿರುವ ದಾವಾ ಆಸ್ತಿಗಳ ವಿವರಣೆ ಸರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಟಿ ಬಿ ಲೆಂಗಡೆ partnership ಫರ್ಮನ ಆದಾಯದಿಂದ ಬಂದ ಮೃತ ಪ್ರತಿವಾದಿ ನಂ.1 ಇವರ ಮಕ್ಕಳ ಮದುವೆಗೆ ಬಹಳಷ್ಟು ಹಣ ಖರ್ಚು ಮಾಡಿರುತ್ತಾರೆ ಹಾಗೂ ನನ್ನ ಮದುವಗೆ ಹಣ ಖರ್ಚು ಮಾಡಿಯೇ ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಫರ್ಮನ Books of

accounts ಗಳನ್ನು ನನಗೆ ಸರಿಯಾಗಿ ನೀಡಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನ್ನ ತಂದೆ ಇರುವಾಗಲೇ ದಾವಾ ಆಸ್ತಿಯಲ್ಲಿ ಪಾಲು ವಿಭಾಗ ಆಗಿದೆ ಹಾಗಾಗಿ ನೆಲ ಮಹಡಿಯಲ್ಲಿ ಒಂದು ಅಂಗಡಿ ಹಾಗೂ ಮೊದಲನೆ ಮಹಡಿ ಒಬ್ಬರಿಗೆ ಹಾಗೂ 2 ನೇ ಮಹಡಿಯನ್ನು ಇನ್ನೊಬ್ಬರಿಗೆ ಪಾಲು ಮಾಡಲಾಗಿದೆ ಎಂದರೆ ಸರಿಯಲ್ಲ. ಆ ರೀತಿ ಪಾಲು ವಿಭಾಗ ಆದ ಪ್ರಕಾರ ಮೃತ ಪ್ರತಿವಾದಿ ನಂ.1 ಹಾಗೂ ಪ್ರತಿವಾದಿ ನಂ.2 ಇವರಿಗೆ ಸಿಟಿಎಸ್ ನಂ.1280/ಬಿ ಆಸ್ತಿಯಲ್ಲಿ ಸಮಾನನಾ ಹಿಸ್ಸೆ ಬಂದಿರುತ್ತದೆ ಎಂದರೆ ಸರಿಯಲ್ಲ. ನಾನು ಯಾವ ಕಾಲಕ್ಕೂ ದಾವಾ ಆಸ್ತಿಯಲ್ಲಿ ಹಿಸ್ಸೆ ಬೇಕು ಹಾಗೂ ಪಾಲು ಮಾಡಿಕೊಡಿ ಎಂದು ಕೇಳಿಯೇ ಇಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಹೇಳಬೇಕಾದ ಸತ್ಯ ಸಂಗತಿ ಹೇಳುತ್ತಿಲ್ಲ ಹಾಗೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಪ್ರತಿವಾದಿ ನಂ.2 ಪರ ಶ್ರೀ.ಆರ್ ಜಿ ಕೆ ವಕೀಲರಿಂದಃ**

**3.** ಟಿ ಬಿ ಲೆಂಗಡೆ ಫರ್ಮ ಗಾಂಧಿ ಬಜಾರ ಲೋಖಂಡೆ ಬೀಲ್ಡಿಂಗ್ ನಲ್ಲಿ ಇತ್ತು ಎಂದರೆ ಸರಿ. ನಂತರ ಟಿ ಬಿ ಲೆಂಗಡೆ ಫರ್ಮ ಈಗ ಸದರಿ ಕಟ್ಟಡದಲ್ಲಿ ಇಲ್ಲ ಎಂದರೆ ಸಾಕ್ಷಿ ಮೃತ ಪ್ರತಿವಾದಿ ನಂ.1 ಇವರು ಸದರಿ ಫರ್ಮನ್ನು ಮುಚ್ಚಿ ಕಟ್ಟಡದ ಬೀಗವನ್ನು ಮತ್ತು ಕೀ ಯನ್ನು ಮಾಲೀಕರಾದ ಲೋಖಂಡೆರವರಿಗೆ ಕೊಟ್ಟು ಬಂದಿರುತ್ತೇನೆಂದು ಹೇಳಿದ್ದರು ಎಂದು ನುಡಿಯುತ್ತಾರೆ. ಈ ದಾವೆ ಸಲ್ಲಿಸುವಾಗ ಟಿ ಬಿ ಲೆಂಗಡೆ ಫರ್ಮ ಅಸ್ಥಿತ್ವದಲ್ಲಿತ್ತು ಅಥವಾ ಇಲ್ಲ ಎಂದು ತಿಳಿದುಕೊಂಡಿಲ್ಲ ಎಂದರೆ ಸಾಕ್ಷಿ ಅದು ಇತ್ತು ಹಾಗೂ ಅದೇ ಕಟ್ಟಡದಲ್ಲಿತ್ತು ಎಂದು ನುಡಿಯುತ್ತಾರೆ. ಸದರಿ ಫರ್ಮ ಯಾವಾಗಿನಿಂದ ಅಸ್ಥಿತ್ವದಲ್ಲಿ ಇಲ್ಲ ಎಂದರೆ ಸಾಕ್ಷಿ ಪ್ರತಿವಾದಿ ನಂ.1 ತೀರಿಕೊಂಡ ನಂತರ ಅವರ ಮಕ್ಕಳಾದ ಪ್ರತಿವಾದಿ ನಂ.1(ಎ) ಮತ್ತು (ಬಿ) ಅದನ್ನು ಮುಚ್ಚಿರುತ್ತಾರೆಂದು ನನಗೆ ಗೊತ್ತಾಗಿರುತ್ತದೆ. ಈ ದಾವೆ ಸಲ್ಲಿಸುವ ಸಮಯದಲ್ಲಿ ಟಿ ಬಿ ಲೆಂಗಡೆ ಫರ್ಮ ಅಸ್ಥಿತ್ವದಲ್ಲಿತ್ತು ಅಥವಾ ಇರಲಿಲ್ಲ ಎಂದು ತೋರಿಸಲು ನಾನು ಯಾವುದೇ ದಾಖಲೆ ಹಾಜರಪಡಿಸಿಲ್ಲ. ನನ್ನ ಅಜ್ಜ ತವನಪ್ಪ ಲೆಂಗಡೆ ಇದ್ದಾಗಲೇ ಟಿ ಬಿ ಲೆಂಗಡೆ ಫರ್ಮ ಅಸ್ಥಿತ್ವದಲ್ಲಿತ್ತು. ನನ್ನ ಅಜ್ಜ ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ತೀರಿಕೊಂಡ ನಂತರ ಕೆಲವು ವರ್ಷಗಳವರೆಗೆ ಮೃತ ಪ್ರತಿವಾದಿ ನಂ.1 ಮತ್ತು ಪ್ರತಿವಾದಿ ನಂ.2 ಸೇರಿ ಸದರಿ ಟಿ ಬಿ ಲೆಂಗಡೆ ಫರ್ಮ ಮುಂದುವರೆಸಿಕೊಂಡು ಬಂದರು ಎಂದರೆ ಸರಿ. 1992 ರಲ್ಲಿ ನನ್ನ ತಂದೆ ಹಾಗೂ ಪ್ರತಿವಾದಿ ನಂ.2 ಟಿ ಬಿ ಲೆಂಗಡೆ ಫರ್ಮನಿಂದ ನಿವೃತ್ತಿಯಾದರು ಎಂದರೆ ಸರಿಯಲ್ಲ. ನಂತರ ಸದರಿ ಟಿ

ಬಿ ಲೆಂಗಡೆ ಫರ್ಮನ್ನು ಮೃತ ಪ್ರತಿವಾದಿ ನಂ.1 ನಡೆಸಿಕೊಂಡು ಬಂದರು ಎಂದರೆ ಸರಿ. ಪ್ರತಿವಾದಿ ನಂ.1 ತೀರಿಕೊಂಡ ನಂತರ ಸದರಿ ಫರ್ಮ ಪ್ರತಿವಾದಿ ನಂ.1(ಎ) ಮತ್ತು (ಬಿ) ನಡೆಸುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸರಿ. Registrar of Firms ಇವರ ಹತ್ತಿರ ಹೋಗಿ ಟಿ ಬಿ ಲೆಂಗಡೆ ಫರ್ಮ ಅಸ್ಥಿತ್ವದಲ್ಲಿ ಇದೆ ಅಥವಾ ಇಲ್ಲ ಎಂಬುದರ ಬಗ್ಗೆ ನಾನು ತಿಳಿದುಕೊಳ್ಳಲಿಲ್ಲ. ಮೃತ ಪ್ರತಿವಾದಿ ನಂ.1 ತೀರಿಕೊಂಡ ನಂತರದಿಂದ ಸದರಿ ಫರ್ಮ ಅಸ್ಥಿತ್ವದಲ್ಲಿ ಇಲ್ಲ ಎಂದರೆ ಸಾಕ್ಷಿ ಅದು ಕಳೆದ 4-5 ವರ್ಷಗಳಿಂದ ಅಸ್ಥಿತ್ವದಲ್ಲಿ ಇಲ್ಲ ಅದರೆ ನಿಖರವಾದ ದಿನಾಂಕ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಹಾಗಿದ್ದರೆ ನಿಮ್ಮ ಪ್ರಕಾರ ಟಿ ಬಿ ಲೆಂಗಡೆ ಫರ್ಮ ಮುಕ್ತಾಯಗೊಂಡಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಟಿ ಬಿ ಲೆಂಗಡೆ ಫರ್ಮ ಮುಕ್ತಾಯಗೊಳ್ಳುವ ಪೂರ್ವದಲ್ಲಿಯೇ ನನ್ನ ತಂದೆ ಹಾಗೂ ಪ್ರತಿವಾದಿ ನಂ.2 ಎಲ್ಲ ಲೆಕ್ಕ ಪತ್ರ ಮಾಡಿಕೊಂಡು ಸದರಿ ಫರ್ಮನಿಂದ ನಿವೃತ್ತಿ ಹೊಂದಿದರು ಎಂದರೆ ಸರಿಯಲ್ಲ. ಟಿ ಬಿ ಲೆಂಗಡೆ ಫರ್ಮನ್ನು ಪ್ರತಿವಾದಿ ನಂ.2 ನಡೆಸಿಲ್ಲ ಹಾಗೂ ಮೃತ ಪ್ರತಿವಾದಿ ನಂ.1 ಮಾತ್ರ ನಡೆಸುತ್ತಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿ ನಂ.2 ಸದರಿ ಫರ್ಮ ನಡೆಸಿರುತ್ತಾರೆ ಹಾಗೂ ಅದರಿಂದ ಆದಾಯ ಪಡೆದುಕೊಂಡಿರುತ್ತಾರೆಂದು ತೋರಿಸಲು ನಾನು ದಾಖಲೆ ಹಾಜರಪಡಿಸಿಲ್ಲ ಎಂದರೆ ಸರಿ. ಟಿ ಬಿ ಲೆಂಗಡೆ ಫರ್ಮ ಅಸ್ಥಿತ್ವದಲ್ಲಿ ಇಲ್ಲದ ಕಾರಣ ನಾನು ದಾವೆಯಲ್ಲಿ ಕೇಳಿರುವ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸಾಕ್ಷಿ ಮುಂಚೆ ಅದು ಅಸ್ಥಿತ್ವದಲ್ಲಿ ಇತ್ತು ಇತ್ತಿತ್ತಲಾಗಿ ಮುಕ್ತಾಯಗೊಂಡಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಫರ್ಮನ ಬಂಡವಾಳ ಹಾಗೂ ಲಾಭ ಎಷ್ಟು ಇತ್ತು ಎಂದು ನನಗೆ ಹೇಳಲು ಬರುವುದಿಲ್ಲ.

4. ದಾವಾ ಆಸ್ತಿಯಲ್ಲಿರುವ ಕಟ್ಟಡದಲ್ಲಿ ಮೂರು ಅಂತಸ್ಥುಗಳು ಇವೆ ಎಂದರೆ ಸರಿ. ಸದರಿ ಕಟ್ಟಡದಲ್ಲಿ ನಾನು ಮೊದಲನೆ ಅಂತಸ್ಥಿನಲ್ಲಿ ವಾಸವಿದ್ದೇನೆ. 2 ನೇ ಅಂತಸ್ಥಿನಲ್ಲಿ ಪ್ರತಿವಾದಿ ನಂ.1 ಇವರ ವಾರಸುದಾರರು ಇದ್ದಾರೆ. ಪ್ರತಿವಾದಿ ನಂ.2 ಇವರ ಕುಟುಂಬದವರು ಸದರಿ ಕಟ್ಟಡದಲ್ಲಿ ವಾಸವಾಗಿಲ್ಲ ಎಂದರೆ ಸಾಕ್ಷಿ ಮುಂಚೆ ಇದ್ದರು ನಂತರ ಬಾಡಿಗೆ ಮನೆ ಮಾಡಿಕೊಂಡು ಬೇರೆ ಕಡೆ ಇದ್ದಾರೆ ಎಂದು ನುಡಿಯುತ್ತಾರೆ. ನೆಲ ಮಹಡಿಯಲ್ಲಿ ಪ್ರತಿವಾದಿ ನಂ.2 ಇವರು ಪ್ರಶಾಂತ ಮೆಟಲ್ಸ ಎಂಬ ನಾಮೆಯಿಂದ ವ್ಯಾಪಾರ ಮಾಡುತ್ತಿದ್ದಾರೆ ಎಂದರೆ ಸರಿ. ವಾದಪತ್ರದಲ್ಲಿ being run under the name and style as Prashant Metals ಇರುವುದನ್ನು delete ಮಾಡಿಕೊಂಡಿರುತ್ತಿರಿ ಎಂದರೆ ಸಾಕ್ಷಿ ನಾನು ಮಾಡಿಕೊಂಡಿಲ್ಲ ಎಂದು ನುಡಿಯುತ್ತಾರೆ. ನಾನು convent

ಶಾಲೆಯ ವಿದ್ಯಾರ್ಥಿಯಾಗಿದ್ದು ನನಗೆ ಇಂಗ್ಲೀಷ ಚೆನ್ನಾಗಿ ಬರುತ್ತದೆ ಎಂದರೆ ಸರಿ. ನಾನು ಮಧ್ಯಂತರ ಅರ್ಜಿ ನಂ.12 ಜೊತೆ ಸಲ್ಲಿಸಿದ ಪ್ರತಿಜ್ಞಾ ಪತ್ರದ 2 ನೇ ಖಂಡಿಕೆಯಲ್ಲಿ being run under the name and style as Prashant Metals ಎಂದು ತಿದ್ದುಪಡಿ ಮಾಡಿ ಆ ಸ್ಥಳದಲ್ಲಿ A running business, dealing in metals business under the name and stule of M/s Prashant Metals, Opp. To Moorusavirmath, Mahaveer street, Hubballi 580028 ಎಂದು ಮಾಡಿ ಎಂದು ಕೇಳಿಕೊಂಡಿರುತ್ತೇನೆ ಎಂದರೆ ಸರಿ. ನಾನು ದಾವೆಯಲ್ಲಿ M/s Prashant Metals ಎಂಬ ಆಸ್ತಿಯನ್ನು ಸೇರಿಸಿಕೊಂಡಿರುತ್ತೇನೆ ಎಂದರೆ ಸರಿ. M/s Prashant Metals firm ಮಾಡಿಕೊಂಡಿರುತ್ತದೆ ಎಂದು ನಾನು ಒಂದು ದಾಖಲೆ ಹಾಜರಪಡಿಸಿರುತ್ತೇನೆ ಎಂದರೆ ಸರಿ. ನಿಪಿ.33 ರಲ್ಲಿ ನಾನು, ನನ್ನ ತಂದೆ, ಪ್ರತಿವಾದಿ ನಂ.1(ಎ) ಮತ್ತು 2 ನೇ ಪ್ರತಿವಾದಿರವರ ಮಗ ಸುಹಾಸ ಎಂಬುವವರನ್ನು ಪಾಲುದಾರರನ್ನಾಗಿ ತೋರಿಸಲಾಗಿದೆ ಎಂದರೆ ಸರಿ. ನಿಪಿ.34 ರಲ್ಲಿ ತೋರಿಸಿರುವ ಫರ್ಮ desolve ಆಗಿದೆ ಎಂದರೆ ಸರಿ. M/s Prashant Metals ಇದು 1992 ರಿಂದಲೇ ಅಸ್ಥಿತ್ವದಲ್ಲಿ ಇಲ್ಲ ಎಂದರೆ ಸಾಕ್ಷಿ ಇದೆ ಎಂದು ನುಡಿಯುತ್ತಾರೆ. M/s Prashant Metals ಫರ್ಮ ಇದು ಅಸ್ಥಿತ್ವದಲ್ಲಿ ಇಲ್ಲ ಆದರೂ ಸಹ ಅದನ್ನು ನಾನು ದಾವಾ ಆಸ್ತಿಯಾಗಿ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.34 ದಾಖಲೆಯಾದ ಪ್ರಕಾರ M/s Prashant Metals ಇದು desolve ಆಗಿ ಅದಕ್ಕೆ ಸಂಬಂಧಪಟ್ಟ ಲೆಕ್ಕಪತ್ರವನ್ನು ಸಹ ಮುಕ್ತಾಯಗೊಳಿಸಲಾಗಿದೆ ಎಂದರೆ ಸರಿ. M/s Prashant Metals ಇದು 1992 ರಲ್ಲಿಯೇ ಮುಕ್ತಾಗೊಂಡಿದೆ ಎಂದರೆ ಸಾಕ್ಷಿ partnership firm ಮಾತ್ರ close ಆಗಿದೆ ಆದರೆ ಅಂಗಡಿ ನಡೆಯುತ್ತಿದೆ ಎಂದು ನುಡಿಯುತ್ತಾರೆ. Prashant Metals ಇದು ದಿಃ10/10/1991 ರಂದು ಪ್ರಾರಂಭಗೊಂಡಿರುತ್ತದೆ. ಆ ಬಗ್ಗೆ partnership deed ಆಯಿತು ಅದು 1992 ರಲ್ಲಿ desolve ಆಯಿತು. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ಏನು ದಾಖಲೆಯಾಯಿತು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. Prashant Metals ಇದು registrar of firms ನಲ್ಲಿ ನೊಂದಣಿಯಾಯಿತು ಎಂದರೆ ಸಾಕ್ಷಿ ನನಗೆ ಖಚಿತವಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ.34 ದಾಖಲೆಯಾದ ನಂತರ ಅದರಲ್ಲಿರುವ ತೋರಿಸಿರುವ ಫರ್ಮ ಮುಕ್ತಾಯಗೊಂಡಿತು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. M/s Prashant Metals ಇದು desolve ಆದ ನಂತರ ಪ್ರತಿವಾದಿ ನಂ.2 ಬೇರೆ ಕಡೆ ದುಡಿಯಲು

ಹೋದರು ಎಂದರೆ ಸರಿ. ಪ್ರತಿವಾದಿ ನಂ.2 ಈಗ Prashant Metals ಎಂಬ ನಾಮೆಯಲ್ಲಿ ವ್ಯಾಪಾರ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಅದು ಸುಳ್ಳು ಎಂದು ನುಡಿಯುತ್ತಾರೆ. Metals ವ್ಯಾಪಾರ ಎಂದರೆ ಮನೆಬಳಕೆ ಹಾಗೂ ಅಡುಗೆ ಮಾಡುವ ವಸ್ತುಗಳು ಎಂದರೆ ಸರಿ. Prashant Metals ಇದನ್ನು ಪ್ರತಿವಾದಿ ನಂ.2 ಮತ್ತು ಅವರ ಮಗ ನಡೆಸುತ್ತಿದ್ದಾರೆ ಎಂದರೆ ಸುಳ್ಳು. ಹಾಗಿದ್ದರೆ ಅದನ್ನು ಯಾರು ನಡೆಸುತ್ತಾರೆ ಎಂದರೆ ಸಾಕ್ಷಿ ಪ್ರತಿವಾದಿ ನಂ.2 ಇವರೇ ನಡೆಸುತ್ತಾರೆ ಆದರೆ ಅವರು ಅದನ್ನು ಬಲವಂತವಾಗಿ ನಡೆಸುತ್ತಿದ್ದಾರೆ ಎಂದು ನುಡಿಯುತ್ತಾರೆ. 1995-96 ರಲ್ಲಿ Prashant Metals ಪ್ರಾರಂಭಗೊಂಡಿರುತ್ತದೆ ಎಂದರೆ ಸರಿಯಲ್ಲ. ಹಾಗಿದ್ದರೆ ಅದು ಯಾವಾಗ ಪ್ರಾರಂಭಗೊಂಡಿತು ಎಂದರೆ ಸಾಕ್ಷಿ ಅದು 1991 ರಲ್ಲಿ ಪ್ರಾರಂಭಗೊಂಡಿರುತ್ತದೆ ಎಂದು ನುಡಿಯುತ್ತಾರೆ. Prashant Metals 1991 ರಲ್ಲಿ ಪ್ರಾರಂಭವಾಯಿತು ಎಂದು ತೋರಿಸಲು ದಾಖಲೆ ಹಾಜರಪಡಿಸಿರುತ್ತಿರಾ ಎಂದರೆ ಸಾಕ್ಷಿ ಸಿಟಿ ಸರ್ವೆ ಕಚೇರಿಯಲ್ಲಿ ನೊಂದಣಿಯಾದ ಬಗ್ಗೆ ದಾಖಲೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. Prashant Metals 1996 ರಲ್ಲಿ ಪ್ರಾರಂಭಗೊಂಡಿರುತ್ತದೆ ಎಂದರೆ ಸುಳ್ಳು.

5. ನಿಡಿ.9 ರಲ್ಲಿ ಪ್ರತಿವಾದಿ ನಂ.2 ಇವರ ಫೋಟೋ ಇದೆ ಎಂದರೆ ಸರಿ. 1991 ರಲ್ಲಿ Prashant Metals ಎಂಬ ಹೆಸರಿನಲ್ಲಿ ಲೈಸನ್ಸ ಪಡೆದ ಬಗ್ಗೆ ಆಗಲೀ ಅಥವಾ ಸದರಿ ಫರ್ಮ ನೊಂದಣಿಯಾದ ಬಗ್ಗೆ ಆಗಲೀ ನಾನು ದಾಖಲೆಗಳನ್ನು ನೋಡಿಲ್ಲ. ಪ್ರತಿವಾದಿ ನಂ.2 ಇವರು ವ್ಯಾಪಾರ ಮಾಡುವ ಉದ್ದೇಶದಿಂದ ನಿಡಿ.9 ರ ಪ್ರಕಾರ ಪರವಾನಿಗೆ ಪಡೆದುಕೊಂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಯಾವುದೇ ವ್ಯಾಪಾರ ಮಾಡಬೇಕಾದರೆ commercial tax ಕಚೇರಿಯಲ್ಲಿ ಆ ಬಗ್ಗೆ ನೊಂದಣಿ ಮಾಡಿಸಿಕೊಳ್ಳಬೇಕು ಎಂದರೆ ಸರಿ. ನಿಡಿ.10 ದಾಖಲೆಯ ಬಗ್ಗೆ ನನಗೆ ಗೊತ್ತಿಲ್ಲ. ನಿಡಿ.10 ರ ಪ್ರಕಾರ Prashant Metals ಎಂಬ ನಾಮೆಯಿಂದ ರೀಟೆಲ್ ವ್ಯಾಪಾರ ಮಾಡಲು ಪ್ರತಿವಾದಿ ನಂ.2 ನೊಂದಣಿ ಪ್ರಮಾಣಪತ್ರ ಪಡೆದುಕೊಂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಿಡಿ.9 ಮತ್ತು 10 ದಾಖಲೆಗಳನ್ನು ಮೇಲ್ಮನವಿ ಚಾಲ್ತಿಯಲ್ಲಿರುವಾಗಲೇ ಪ್ರತಿವಾದಿ ನಂ.2 ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಹಾಜರಪಡಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.1 Prashant Metals ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಮ್ಮ ಹೆಸರಿನಲ್ಲಿಯೇ ಮಾಹಿತಿ ನೀಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಿಡಿ.11 ರಿಂದ 32 ದಾಖಲೆಗಳನ್ನು ಸಹ ಪ್ರತಿವಾದಿ ನಂ.1 ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಹಾಜರಪಡಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. Prashant Metals ವ್ಯವಹಾರದಲ್ಲಿ ನಾನು ಭಾಗಿ ಆಗಿಲ್ಲ ಎಂದರೆ ಸಾಕ್ಷಿ

ಆಗಿರುತ್ತೇನೆಂದು ಎಂದು ನುಡಿಯುತ್ತಾರೆ. 1991 ರಿಂದ ನನ್ನ ತಂದೆ ಇದ್ದಾಗಿನಿಂದಲೂ ನಾನು ಸದರಿ ವ್ಯವಹಾರದದಲ್ಲಿ ಭಾಗೀಯಾಗಿರುತ್ತೇನೆ ಆದರೆ ಆ ಬಗ್ಗೆ ದಾಖಲೆಗಳು ಇರುವುದಿಲ್ಲ. ಪ್ರತಿವಾದಿ ನಂ.2 Prashant Metals ಎಂಬ ನಾಮೆಯಲ್ಲಿ ವ್ಯವಹಾರ ಮಾಡುತ್ತಾರೆ ಹಾಗೂ ಅದಕ್ಕೂ ಮತ್ತು ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವ M/s Prashant Metals ಈಗಾಗಲೇ ಮುಕ್ತಾಯಗೊಂಡ ಕಾರಣ ನನಗೆ ಅದರಲ್ಲಿ ಯಾವುದೇ ಪರಿಹಾರ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. Prashant Metals ನಲ್ಲಿ ನನಗೆ ಯಾವುದೇ ಹಕ್ಕು ಹಿತಸಂಬಂಧ ಇಲ್ಲ ಎಂದರೆ ಸರಿಯಲ್ಲ.

(**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ನಂ.2 ಪರ ಶ್ರೀ ಆ್‌ರ್ ಜಿ ಕೆ ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು**).

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**